ಶೋಭೆ ಬಂದಿರುವಂತೆ ಸೆಳೆಯುವ ಮಚ್ಚೆ. ಮುಖದಲ್ಲಿ ಗಾಂಭೀರ್ಯ ತುಂಬಿಕೊಂಡು ತನ್ನೊಂದಿಗೆ ಚರ್ಚಿಸುವಾಗ ತನ್ನನ್ನು ಸೆಳೆದದ್ದು ಯಾವುದು? ತಾಪಸಿಯ ಎದುರು ಅವಳು ಏನೂ ಅಲ್ಲವಾಗಿತ್ತು. ಅವಳ ಬುದ್ಧಿಶಕ್ತಿಯೇ ಅಥವ ಆ ಗಾಂಭೀರ್ಯವೆ? ಅದನ್ನು ಮುರಿದು ಜಯಪಡೆಯುವ, ಹೊಂದುವ ಛಲ ಮೂಡುತ್ತಿತ್ತೆ? ಪ್ರಬಂಧ ಎಲ್ಲ ರೀತಿಯಲ್ಲೂ ಚೆನ್ನಾಗಿತ್ತು. ಆದರೂ ಅತೃಪ್ತಿ ಸೂಚಿಸುತ್ತ ಏನೇನೊ ಕೊಂಕು ತೆಗೆಯುತ್ತ ಪದೇಪದೇ ಸೂಚನೆ ನೀಡಿದರೂ, ಅರ್ಥವಾದರೂ ಆಗದವಳಂತೆ ಸಾಧಿಸುತ್ತಿದ್ದ ಅವಳನ್ನು ತಾನೂ ಸಾಧಿಸುತ್ತ ಎರಡುಮೂರು ವರ್ಷಗಳು ವ್ಯರ್ಥವಾಗಿ ಕೊನೆಗೆ ಮಣಿದಿದ್ದಳು. ತಾಪಸಿ ತವರಿಗೆ ಹೋದಾಗ ಮನೆಗೇ ಎರಡು ಬಾರಿ ಕರೆಸಿಕೊಂಡಿದ್ದು, ಇದೇ ಕೋಣೆಯಲ್ಲಿ ಏನನ್ನೋ ಗೆಲ್ಲುವಂತೆ ವಿಜೃಂಭಿಸಿ ಕೂಡುತ್ತಿದ್ದುದು ನೆನಪಿನಲ್ಲಿ ಚಿತ್ರದಂತೆ ಮರುಜೀವ ಪಡೆಯಿತು. ಡಾಕ್ಟರೇಟ್ ಪ್ರದಾನವಾಗಿ ವಾರದ ಅನಂತರ ಯೂನಿವರ್ಸಿಟಿ ಕಾರಿಡಾರಲ್ಲಿ ಅಕಸ್ಮಾತ್ ಎದುರು ಸಿಕ್ಕವಳು, 'ಐ ಹೇಟ್ ಯು' ಅಂದುಬಿಟ್ಟಳು. ತನಗವಳ ಹೆಸರು ಮುಖಚಹರೆ ಒಂದೂ ನೆನಪಿಗೆ ಬರದಿದ್ದರೂ ಆ ಮಚ್ಚೆ ಮಾತ್ರ ಮರೆಯುವುದಿಲ್ಲ.

ಒಂದುವಾರ ಅಂತದೇನಾಗದಿದ್ದರೂ ಆವತ್ತು ಬೆಳಗ್ಗೆ ಗಂಧರ್ವ ಬಡಾವಣೆಯವರೆಲ್ಲ ವ್ಯೂಹ ರಚಿಸಿಕೊಂಡವರಂತೆ ಅಟಕಾಯಿಸಿದರು. 'ನಾಯಿ ಮಾಡಿದ್ದನ್ನು ಒಂದೋ ನೀವು ತೆಗೀರಿ; ಇಲ್ಲಾ ನಾಯಿಗಳನ್ನ ಇಲ್ಲೇ ಕಟ್ಟಿಹಾಕಿ ಹೋಗಿ' ಅಂತ ರಸ್ತೆಗೆ ಅಡ್ಡ ನಿಂತು ಬಿಟ್ಟರು. 'ಅಯ್ಯೋ, ನಾಯಿಗಳು ಅವು, ಅವಕ್ಕೇನು ತಿಳಿಯತ್ತೆ?' ಅಂದರು ಜಯರಾಮಯ್ಯ.

'ಮತ್ತೆ ನೀವು?'

'ಅದೇನು ಹಾಗಂತೀರ? ಇಲ್ಲೆಲ್ಲ ಮಾಡ್ಲಿದಾರೆ ನೋಡಿ... ಅವರಿಗೇನಂತೀರ?'

'ಯಾರನ್ನೂ ಬಿಟ್ಟಿಲ್ಲ ನಾವು. ಇಲ್ಲಿ ಕೆಲವರು ಪೇಪರಲ್ಲಿ ತೆಗ್ದಿದಾರೆ ನೋಡಿ, ಗುರುತಿದೆ ಇನ್ನೂ.'

'ಬೀದಿ ನಾಯಿಗಳು ಬೇಕಾಬಿಟ್ಟಿ ಮಾಡತವೆ, ಅದು ಪರವಾಗಿಲ್ವ?'

'ಅವಕ್ಕೆ ಕಲ್ಲು ಹೊಡೆದು ಓಡಿಸ್ತೀವಿ ಕಂಡ್ರೆ. ನಿಮ್ಮ ನಾಯಿಗಳಿಗು ಹೊಡೆಯೋದ?'

'ಪ್ರಾಣಿದಯಾ ಸಂಘದಲ್ಲಿ ಆಪ್ತರಿದಾರೆ ನಮಗೆ, ಪ್ರಾಣಿಗಳಿಗೆ ಅಡ್ಡಿ ಮಾಡತಿದಾರೆ ಅಂತ ದೂರು ಕೊಟ್ಟು ಕರೆಸ್ಲೇನ್ರೀ?'

'ಈಗ್ಲೆ ಕರಸಿ, ಅವ್ರು ತೆಗೀತಾರ ಇಲ್ಲ ನೀವು ತೆಗಿತೀರ ನೋಡತೀವಿ' ತೋಳೇರಿಸಿದ ಒಬ್ಬ ಜಿಮ್‌ಗೆ ಹೋಗೋ ಪಹಿಲ್ವಾನ್ ತರದವ.

ಮುಂದುವರಿಸಿ ಪ್ರಯೋಜನವಿರಲಿಲ್ಲ. ಆಯ್ತು ಇನ್ನು ಹೀಗಾಗದಂತೆ ನೋಡಿಕೊಳತೀವಿ ಅಂತ ಒಪ್ಪಿಕೊಂಡು ಬಚಾವಾದರು. ಮರುದಿನದಿಂದ ಆ ಬಡಾವಣೆಯಲ್ಲಿ ನಾಯಿಗಳು ನಿಲ್ಲದಂತೆ ಎಳೆದುಕೊಂಡು ಮುಂದುವರಿದು ಮುಖ್ಯರಸ್ತೆಯ ಪಕ್ಕದಲ್ಲಿ ಅವಕಾಶ ಕೊಟ್ಟು ಕೆರೆಯತ್ತ ನಡೆಯುವುದು ಚಲಾವಣೆಗೆ ಬಂತು. ಕೆರೆ ಪಕ್ಕದಲ್ಲಿ ಕುಂಬಳಕಾಯಿ ರಸ ಮಾರುವ ಶರ್ಮಾ, ವಡಾ ಚಟ್ನಿ ಕೊಡುವ ಅಂಬಮ್ಮ ಹೊಸದಾಗಿ ಪರಿಚಯವಾಗಿದ್ದರು.

ಆವತ್ತು ಕೆರೆಯ ಹತ್ತಿರ ಮಿರ್ಚಿಭಜಿ ತಿನ್ನುವುದೊ ಅಥವ ಪಕೋಡ ನೋಡೋಣವೊ ಅನ್ನುವ ಚರ್ಚೆಯಲ್ಲಿದ್ದರು. ದೀನಪ್ರಸಾದರ ಎದೆಯಲ್ಲಿ ಇದ್ದಕ್ಕಿದ್ದಂತೆ ಚುಳ್ ಅಂತ ನೋವಿನನುಭವ ಸುರುವಾಯಿತು. ನಿಲ್ಲಲಾರದೆ ಕರೆಯ ಪಕ್ಕ ಮುಖ ಹಿಂಡುತ್ತ ಕುಳಿತುಬಿಟ್ಟರು. ಅದನ್ನು ನೋಡಿದ ಜಯರಾಮಯ್ಯ ಕಂಗಾಲಾದರು. ತಕ್ಷಣ ಒಂದು ಆಟೊ ನಿಲ್ಲಿಸಿ ನಾಯಿಗಳ ಜೊತೆ ದೀನಪ್ರಸಾದರನ್ನು ಹತ್ತಿಸಿಕೊಂಡು ಆಸ್ಪತ್ರೆಯ ಹೆಸರು ಹೇಳಿದರು. ಹೋಗುತ್ತಲೇ ಯಾರಿಗೊ ಫೋನು ಮಾಡಿದರು. ಸುಭದ್ರ ನರ್ಸಿಂಗ್ ಹೋಮ್ ಎದುರು ಇಳಿದ ಜಯರಾಮಯ್ಯನನ್ನು ನೋಡುತ್ತಿದ್ದಂತೆ ಸಿಬ್ಬಂದಿ ಕಾಳಜಿಯಿಂದ ದೀನಪ್ರಸಾದರನ್ನು ತಳ್ಳುಕುರ್ಚಿಯಲ್ಲಿ ಕರೆದೊಯ್ದು